ಶ್ರೀ ಎನ್ ರಾಚಯ್ಯ,— ಹಣ ದೊರುಪಯೋಗ ಅಂದರೆ ೧೯೬೩ರವರೆಗೆ ಖಾಸಗಿಯವರು ಅದನ್ನು ನಡೆಸುತ್ತಿದ್ದರು. ೧೯೬೪ರಿಂದ ೧೯೬೫ರ ವರೆಗೆ ರಿಜಿಸ್ಟರ್ಡ್ ಸಂಸ್ಥೆಗಳವರು ಅದನ್ನು ನಡೆಸುತ್ತಿದ್ದರು. ಒಂದು ವೇಳೆ ಹಣ ಅಲ್ಲಿ ನಿಜವಾಗಿ ದುರುಪಯೋಗವಾಗಿದ್ದರೆ ಕಾನೂನು ಪ್ರಕಾರ ರಿಜಿಸ್ಟ್ರಾರ್ ಅವರಿಂದ ಎನ್‌ಕ್ವೈರಿ ಮಾಡಿಸಿ ಅವರ ಮೇಲೆ ಸೂಕ್ತಕ್ರಮವನ್ನು ತೆಗೆದುಕೊಳ್ಳುತ್ತೇವೆ. ಅಲ್ಲಿ ದುರುಪಯೋಗವಾಗುವುದಕ್ಕೆ ಅವಕಾಶವಿಲ್ಲ ಏಕೆಂದರೆ ಅದು ರಿಜಿಸ್ಟರ್ಡ್ ಬಾಡಿ.

EXPERT TRAINING TO FISHER MEN IN DEEP SEA FISHING

340 SRI JAYAPRAKSH SHETTY (Brahmavar).— Will the Minister of State for Fisheries and Horticulture be pleased to state :—

(*a*) Whether there is any arrangement in the state to give expert training to fishermen in deep-sea fishing, in the location of catches of fish prawn at a particular place and at a particular time as is given in advanced countries like Norway and Japan ;

(*b*) If not, the steps taken or proposed to be taken to provide such training to the fishermen in the state ?

SRI K. T. RATHOD.— (Minister of State for Fisherier and Horticulture.

(*a*) Yes.

(*b*) Does not arise

SRI JAYAPRAKASH SHETTY.—I would like to know whether there is any expert machinery of Government to provide information and guidance to fishermen regarding availability of rich catches in particular location at a particular time particularly to the fishermen of mechanised boats ?

† SRI K. T. RATHOD.—The hon. Member is aware that Government has made arrangements for sending every year 12 persons for training to Central Institute of Fisheries Co-operatives, Cochin and Madras. At these places the fishermen are given training for handling electronic instruments like the Echo sounder which is used for locating vertical distribution of fish and acoustic instrument for locating horizontal distrubution of fish. We have trained 34 such fishermen in fishing ; 32 men in engine driving ; 10 shore mechanics ; 12 radio telephone operators ; 3 Air technicians ; and one farm technician ; in all we have trained 82 fishermen who could be in a position to know the location of fish for useful operation.

SRI JAYAPRAKASH SHETTY.—This training is for persons using big ships. What about the persons working in the mechanised boats ?

SRI K. T. RATHOD.—This training is given to persons using all kinds of fishing boats.

SRI JAYAPRAKASH SHETTY.—Many times fishermen come bear handed because they lack in necessary information and guidance with regard to availability of fish. Will the Government establish an expert machinery to show them the location and time for rich catches of fish ?

SRI K. T. RATHOD.—To solve this problem, Government of India is seriously considering the matter. Arrangements will be made to see that some expert training is given to fishermen on these lines.

ಶ್ರೀ ಎಸ್. ಬಂಗಾರಪ್ಪ.—ಈ ಬೆಸ್ತರಿಗೆ ತರಪೇತಿ ಕೊಡತಕ್ಕ ಟ್ರೈನಿಂಗ್ ಸಂಸ್ಥೆಗಳು ಎಷ್ಟಿವೆ ಎಂಬುದನ್ನು ತಿಳಿಸೋಣವಾಯಿತು. ಆದರೆ ನಮ್ಮಲ್ಲಿರತಕ್ಕ ಬೆಸ್ತರಿಗೂ ಈ ತರಪೇತಿಯನ್ನು ಕೊಡ ಬೇಕಾಗಿದ್ದರೆ, ಹಾಲಿ ಇರತಕ್ಕ ಈ ಎರಡು ಸಂಸ್ಥೆಗಳ ಮೂಲಕ ಎಷ್ಟು ಕಾಲ ಹಿಡಿಯುತ್ತದೆಂಬುವನ್ನು ತಿಳಿಸುತ್ತೀರಾ ?

ಶ್ರೀ ಕೆ. ಟಿ. ರಾಠೋಡ್.—ನಾನಾಗಲೇ ತಿಳಿಸಿದಂತೆ ಎರಡು ಕಡೆಗಳಿಗೆ ತರಪೇತಿಗಾಗಿ ಜನರನ್ನು ಕಳುಹಿಸಿಕೊಡಲಾಗುತ್ತಿದೆ. ಸರ್ಕಾರದವರು ಈ ತರಪೇತಿ ಪಡೆಯುತಕ್ಕ ಜನರಿಗೆ ತಿಂಗಳಿಗೆ ೧೫೫ ರೂ. ಗಳಂತೆ ಮತ್ತು ೭೫ ರೂ. ಗಳಂತೆ ಸ್ಟೈಪೆಂಡನ್ನು ಕೊಡಲಾಗುತ್ತಿದೆ. ಈ ಎರಡೂ ಶಾಲೆಗಳಿಂದ ಇಲ್ಲಿಯವರೆಗೆ ತರಪೇತಿ ಪಡೆದಂಥ ಜನರು ನಮ್ಮಲ್ಲಿ ಒಟ್ಟು ೮೨ ಜನರಿದ್ದಾರೆ. ನಾವು ತರಪೇತಿಗಾಗಿ ಕಳುಹಿಸತಕ್ಕ ಆ ಎರಡು ಶಾಲೆಗಳೆಂದರೆ—ಒಂದು ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಫಾರ್ ಫಿಷರೀಸ್ ಕೋಆಪರೇಟೀವ್ಸ್—ಕೋಚಿನ್ ಮತ್ತು ಇನ್ನೊಂದು ಇದೇ ಸಂಸ್ಥೆ ಮದ್ರಾಸಿನಲ್ಲಿದೆ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—ಮಾನ್ಯ ಮಂತ್ರಿಗಳು ಹೇಳಿದ್ದು ಇಲ್ಲಿಯವರೆಗೆ ಆದ ಮೆರೀನ್ ಫಿಷಿಂಗಿಗಾಯಿತು. ಇನ್‌ಲ್ಯಾಂಡ್ ಫಿಷಿಂಗಿಗೆ ತರಪೇತಿ ಕೊಡಲು ಏನು ವ್ಯವಸ್ಥೆ ಮಾಡಿದಾರೆ ? ಈ ಎರಡನ್ನೂ ಬೇರ್ಪಡಿಸುವುದಕ್ಕೆ ಏನು ಏರ್ಪಾಡನ್ನು ಮಾಡಿದ್ದಾರೆ ?

ಶ್ರೀ ಕೆ. ಟಿ. ರಾಠೋಡ್.—ಇನ್‌ಲ್ಯಾಂಡ್ ಫಿಷಿಂಗ್ ತರಪೇತಿಯನ್ನು ಮಂಗಳೂರು ಗಂಗವಳ್ಳಿ, ಹೊನ್ನಾವರ ಮತ್ತು ಕಾರ್ವಾರಗಳಲ್ಲಿ ಕೊಡಲಾಗುತ್ತಿದೆ. ಮಂಗಳೂರಲ್ಲಿ ೮೫೨ ಜನರಿಗೂ, ಗಂಗವಳ್ಳಿಯಲ್ಲಿ ೪೫೦ ಜನರಿಗೂ, ಕಾರ್ವಾರದಲ್ಲಿ ೬೨೭ ಜನರಿಗೂ ಮತ್ತು ಹೊನ್ನಾವರದಲ್ಲಿ ೪೮೩ ಜನರಿಗೂ ಟ್ರೈನಿಂಗನ್ನು ಕೊಡಲಾಗುತ್ತಿದೆ. ಕೋಸ್ಟಲ್ ಲೈನಿನಲ್ಲಿ ಮೈಕನೈಜ್ಡ್ ಫಿಷಿಂಗಿಗೆ ಅವಕಾಶ ಕಲಿಸಿ ಕೊಟ್ಟಿರುವಂತೆ ಈ ಇನ್‌ಲ್ಯಾಂಡ್ ಫಿಷಿಂಗಿಂಗೂ ಹೆಚ್ಚು ಅವಕಾಶ ಕಲ್ಪಿಸಲು ಸರ್ಕಾರ ಇನ್ನೂ ಪರಿಶೀಲನೆ ನಡೆಸುತ್ತಿದೆ.

ಒಬ್ಬ ಮಾನ್ಯ ಸದಸ್ಯರು.—ನಮ್ಮಲ್ಲೇ ೨೦೦ ಮೈಲಿ ಕರಾವಳಿ ಪ್ರದೇಶವಿದ್ದಾಗ್ಯೂ ಇನ್ನಿ ಏಕೆ ತರಪೇತಿ ಕೇಂದ್ರಗಳನ್ನು ತೆರೆಯಬಾರದು ?

ಶ್ರೀ ಕೆ. ಟಿ. ರಾಠೋಡ್.—ಮಾನ್ಯ ಸದಸ್ಯರು ನಾರ್ವೆ ಮತ್ತು ಜಪಾನುಗಳಲ್ಲಿ ಇರುವಂಥ ತರಪೇತಿ ಕೇಂದ್ರಗಳನ್ನು ಪುನಸ್ಸಿನಲ್ಲಿಟ್ಟುಕೊಂಡು ಕೇಳುತ್ತಿದ್ದಾರೋ ಅಥವಾ ಬೇರೆಯದನ್ನು ಕೇಳುತ್ತಿದ್ದಾರೋ ಗೊತ್ತಾಗುವುದಿಲ್ಲ. ಆದರೆ ಸಧ್ಯದಲ್ಲಿ ನಾವು ಕೊಡುತ್ತಿರುವ ತರಪೇತಿ ನಮಗೆ ಸಾಕಾಗಿದೆ.

MADAM SPEAKAR.—Question Nos. : 173 and 357 are held over.

PROMOTION TO ASSISTANT SUPERINTENDENT OF FISHERIES

397 SRI S. M. SHEERANALY CHANDRASEKHER (Hosanagar).— Will the Minister of State for Fisheries and Horticulture be pleased to state:—